ರಾಜ್ಯದಲ್ಲಿ ಸ್ತ್ರೀಶಕ್ತಿ ಯೋಜನೆಯಡಿ ರಚಿತವಾಗಿರುವ ಸ್ವಸಹಾಯ ಗುಂಪುಗಳು

2353(3063) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸ್ತ್ರೀಶಕ್ತಿ ಯೋಜನೆಯಡಿ ಎಷ್ಟು ಸ್ವಸಹಾಯ ಗುಂಪುಗಳು ಕಾರ್ಯನಿರತವಾಗಿವೆ; ಜಿಲ್ಲಾವಾರು ವಿವರ ನೀಡುವುದು;

ಆ) ಸ್ತ್ರೀಶಕ್ತಿ ಯೋಜನೆಯ ರೂಪುರೇಷೆಗಳ ವಿವರ ನೀಡುವುದು;

ಇ) ಅಂಗನವಾಡಿ ಕಾರ್ಯಕರ್ತೆಯರ ಅಸಹಕಾರ ಮತ್ತು ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ರಾಷ್ಟ್ರೀಕೃತ ಬ್ಯಾಂಕ್ ಅಧಿಕಾರಿಗಳ ಉದ್ಧಟತನದಿಂದ ಸ್ತ್ರೀಶಕ್ತಿ ಯೋಜನೆ ಕೋಲಾರ ಹಾಗೂ ಇನ್ನಿತರ ಜಿಲ್ಲೆಗಳಲ್ಲಿ ಅವನತಿ ಹಾದಿ ಹಿಡಿದಿರುವುದು ನಿಜವೇ;

ಈ) ಹಾಗಿದ್ದಲ್ಲಿ, ಸರ್ಕಾರ ಈ ದಿಶೆಯಲ್ಲಿ ಕೈಗೊಂಡಿರುವ ಕ್ರಮಗಳೇನು;

ಉ) ಗ್ರಾಮೀಣ ಪ್ರದೇಶಗಳಲ್ಲಿ ಈ ಯೋಜನೆಯ ಸ್ಪಷ್ಟ ಅರಿವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಈ ಯೋಜನೆಯ ವಿಶೇಷ ಪ್ರಚಾರ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಸ್ತ್ರೀಶಕ್ತಿ ಯೋಜನೆಯಡಿ 73893 ಸ್ವಸಹಾಯ ಗುಂಪುಗಳು ಕಾರ್ಯನಿರತವಾಗಿವೆ. ಜಿಲ್ಲಾವಾರು ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ಇದೊಂದು ಮಹಿಳೆಯರ ಸಬಲೀಕರಣ ಯೋಜನೆ ಗ್ರಾಮೀಣ ಪ್ರದೇಶದಲ್ಲಿರುವ ಮಹಿಳೆಯರಿಗೆ ಪ್ರೋತ್ಸಾಹ ನೀಡಿ ಸ್ವಸಹಾಯ ಗುಂಪುಗಳನ್ನು ರಚಿಸುವುದು. ಪ್ರತಿಯೊಂದು ಗುಂಪಿನಲ್ಲಿ ಸಮಾನ ಸಾಮಾಜಿಕ ಅಥವಾ ಆರ್ಥಿಕ ಹಿನ್ನೆಲೆಯುಳ್ಳ ಸಮಾನ ಮನಸ್ಸಿನ ಪರಸ್ಪರ ವಿಶ್ವಾಸದಿಂದ ಕೂಡಿದ 15 ರಿಂದ 20 ಜನ ಮಹಿಳೆಯರು ಇರುವಂತೆ ನೋಡಿಕೊಳ್ಳುವುದು. ರಾಜ್ಯದ ಒಟ್ಟು 27 ಜಿಲ್ಲೆಗಳಲ್ಲಿ 75000 ಗುಂಪುಗಳನ್ನು ರಚಿಸಿ 11 ಲಕ್ಷ ಮಹಿಳೆಯರನ್ನು ಈ ಯೋಜನೆಯಡಿ ಇದುವರೆಗೂ ತೊಡಗಿಸಲಾಗಿದೆ.

ನಿಗದಿತವಾಗಿ ಉಳಿತಾಯ ಮಾಡುವುದು ತಮ್ಮದೇ ಹಣವನ್ನು ಸ್ವಸಹಾಯ ತತ್ವದ ಮೂಲಕ ಸಾಲ ನೀಡುವುದು. ಸಾಮಾನ್ಯ ನಿಧಿಯನ್ನು ರೂಢಿಸುವುದು. ಒಮ್ಮತದ ತೀರ್ಮಾನದಿಂದ ಎಲ್ಲಾ ಸಮಸ್ಯೆಗಳನ್ನು ತಮ್ಮಲ್ಲೇ ಬಗೆಹರಿಸಿಕೊಳ್ಳುವುದಲ್ಲದೆ ಆದಾಯೋತ್ಪನ್ನ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದೇ ಆಗಿದೆ.

ಇ) ನಿಜವಲ್ಲ

ಈ) ಅನ್ವಯಿಸುವುದಿಲ್ಲ

ಉ) ಇಲ್ಲ

ಊ) ಅನ್ವಯಿಸುವುದಿಲ್ಲ

ಅನುಬಂಧ – 1

ಸ್ತ್ರೀಶಕ್ತಿ ಯೋಜನೆಯಡಿ ರಚನೆಯಾಗಿರುವ ಸ್ವಸಹಾಯ ಗುಂಪುಗಳ ಹಾಗೂ ಗುಂಪುಗಳಲ್ಲಿನ ಸದಸ್ಯರ ಜಿಲ್ಲಾವಾರು ವಿವರ

ಕ್ರ. ಸಂ.	ಜಿಲ್ಲೆಯ ಹೆಸರು	ಕಾರ್ಯನಿರತವಾಗಿರುವ ಸ್ತ್ರೀಶಕ್ತಿ ಗುಂಪುಗಳ ಸಂಖ್ಯೆ
1.	ಬೆಂಗಳೂರು(ನಗರ)	1614
2.	ಬೆಂಗಳೂರು (ಗ್ರಾ)	3993
3.	ಬಾಗಲಕೋಟೆ	2331
4.	ಬೆಳಗಾಂ	6961
5.	ಬಳ್ಳಾರಿ	2655
6.	ಬೀದರ್	1815
7.	ಬಿಜಾಪುರ	2580
8.	ಚಾಮರಾಜನಗರ	2258
9.	ಚಿಕ್ಕಮಗಳೂರು	1285
10.	ಚಿತ್ರದುರ್ಗ	2089
11.	ದಾವಣಗೆರೆ	2930
12.	ದಕ್ಷಿಣ ಕನ್ನಡ	3017
13.	ಧಾರವಾಡ	1911
14.	ಗದಗ	1415
15.	ಗುಲ್ಬರ್ಗ	4331
16.	ಹಾಸನ	3052
17.	ಹಾವೇರಿ	3160
18.	ಕೊಡಗು	568
19.	ಕೋಲಾರ	4276
20.	ಕೊಪ್ಪಳ	1473
21.	ಮಂಡ್ಯ	3489
22.	ಮೈಸೂರು	3559
23.	ರಾಯಚೂರು	2489
24.	ಶಿವಮೊಗ್ಗ	2234
25.	ತುಮಕೂರು	5280
26.	ಉಡುಪಿ	1880
27.	ಉತ್ತರ ಕನ್ನಡ	1248
	ಒಟ್ಟು	**73893**